

ಟಿ ಶರ್ಟ್‌ನೊಂದಿಗೆ ಇದನ್ನು ಧರಿಸಿದರೆ ಲುಕ್ ಇನ್ನಷ್ಟು ಚೆನ್ನಾಗಿ ಕಾಣುತ್ತದೆ. ಎಲ್ಲಾ ಋತುವಿಗೂ ಇದು ಹೇಳಿಮಾಡಿಸಿದ್ದು.

## ಬೋರ್ಡ್ ಶಾರ್ಟ್ಸ್

ಒಂದು ಜೋಡಿ ಉತ್ತಮ ಗುಣಮಟ್ಟದ ಬೋರ್ಡ್ ಶಾರ್ಟ್ಸ್ ಮಗುವಿನ ವಾರ್ಡ್‌ರೋಬ್‌ನಲ್ಲಿದ್ದರೆ ಅದು ಅವರ ಸ್ಟೈಲ್ ಅನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಈ ಬೋರ್ಡ್ ಶಾರ್ಟ್ಸ್ ಆರಾಮದಾಯಕವಾದ ದಿರಿಸಾಗಿದೆ. ಬೇಸಿಗೆ ಸಮಯಕ್ಕೆ ಇದು ಹೇಳಿಮಾಡಿಸಿದ್ದು. ಇದರಲ್ಲಿ ಪಾಕೆಟ್‌ಗಳು ಹೆಚ್ಚಾಗಿದ್ದು ಮಕ್ಕಳಿಗೆ ತುಂಬಾ ಇಷ್ಟವಾಗುತ್ತದೆ.

## ಮದ್ರಾಸ್ ಶಾರ್ಟ್ಸ್

ಈ ಸ್ಟೈಲಿಷ್ ಮದ್ರಾಸ್ ಶಾರ್ಟ್ಸ್ ಹತ್ತಿಯಿಂದ ಮಾಡಲ್ಪಟ್ಟಿದೆ. ಈ ಮದ್ರಾಸ್ ಶಾರ್ಟ್ಸ್ ಬೇಸಿಗೆಗೆ ಉತ್ತಮವಾಗಿದೆ. ಏಕೆಂದರೆ ಇವು ಧರಿಸಲು ತುಂಬಾ ಆರಾಮದಾಯಕವಾಗಿರುತ್ತದೆ. ಇದನ್ನು ಶರ್ಟ್ ಹಾಗೂ ಟೀ ಶರ್ಟ್ ಜೊತೆ ಮ್ಯಾಚ್ ಮಾಡಿಕೊಂಡು ಹಾಕಬಹುದು. ಮಕ್ಕಳು ಇಷ್ಟಪಡುವ ಉಡುಪಾಗಿದೆ ಇದು. ಸಾಕಷ್ಟು ವಿನ್ಯಾಸದ, ಬಣ್ಣದ ಶಾರ್ಟ್ಸ್‌ಗಳು ಇದರಲ್ಲಿ ಲಭ್ಯವಿದೆ.

## ಡೆನಿಮ್ ಶಾರ್ಟ್ಸ್

ಮಕ್ಕಳು ಡೆನಿಮ್ ಶಾರ್ಟ್ಸ್ ಅನ್ನು ತುಂಬಾ ಇಷ್ಟಪಡುತ್ತಾರೆ. ಪಾರ್ಟಿಗೆ ಹೋಗುವುದಕ್ಕೆ, ಹೊರಗಡೆ ಸುತ್ತಾಡುವುದಕ್ಕೆ ಇದು ಹೇಳಿಮಾಡಿಸಿದ್ದು. ನಿಮ್ಮ ಪುಟ್ಟ ಮಗುವಿಗೆ ಈ ಡೆನಿಮ್ ಶಾರ್ಟ್ಸ್‌ಗಳು ತುಂಬಾ ಖುಷಿಯಾಗಬಹುದು.

## ಐಲೆಟ್ ಶಾರ್ಟ್ಸ್

ಬೆಚ್ಚಗಿರುವ ಹವಾಮಾನಕ್ಕೆ ಈ ಐಲೆಟ್ ಶಾರ್ಟ್ಸ್ ಹೇಳಿಮಾಡಿಸಿದ ಉಡುಪಾಗಿದೆ. ಇದನ್ನು ಹತ್ತಿಯಿಂದ ತಯಾರಿಸಲಾಗುತ್ತದೆ.



ಬೇಸಿಗೆಗೆ ಮಕ್ಕಳಿಗೆ ಈ ಶಾರ್ಟ್ಸ್ ಹಾಕಿದರೆ ಚೆನ್ನಾಗಿ ಕಾಣಿಸುತ್ತದೆ. ನಿಮ್ಮ ಮುದ್ದು ಮಗಳು ಈ ಮುದ್ದಾದ ಶಾರ್ಟ್ಸ್‌ನಲ್ಲಿ ಸ್ಟೈಲಿಷ್ ಆಗಿ ಕಾಣುವುದಂತೂ ಗ್ಯಾರಂಟಿ.

## ಪ್ಯಾಚಸ್ ಮತ್ತು ಎಂಬ್ರಾಯಿಡರಿ

ಈ ಶಾರ್ಟ್ಸ್ ಮೇಲೆ ಅವರ ಇಷ್ಟದ ಕಾರ್ಟೂನ್ ಕ್ಯಾರೆಕ್ಟರ್ ಟೀ ಶರ್ಟ್, ಫನ್ ಶರ್ಟ್ಸ್ ಇಂತಹವುಗಳನ್ನು ಮ್ಯಾಚ್ ಮಾಡಿ ಹಾಕಬಹುದು. ಜೀನ್ಸ್ ಶಾರ್ಟ್ಸ್ ಮೇಲೆ ಪ್ಯಾಚಸ್ ಹಾಗೂ ಎಂಬ್ರಾಯಿಡರಿ ವಿನ್ಯಾಸವಿರುವ ಟೀ ಶರ್ಟ್ ಹಾಕಿದರೆ ಲುಕ್ ಕೂಡ ಚೆನ್ನಾಗಿರುತ್ತದೆ.

## ಸಸ್ಪೆಂಡರ್ಸ್ ಹಾಗೂ ಜಂಪರ್ಸ್

ಇಂದಿನ ಮಕ್ಕಳಿಗೆ ಸ್ಟೈಲ್ ಬಗ್ಗೆ ತುಂಬಾ ಚೆನ್ನಾಗಿ ಗೊತ್ತಿರುತ್ತದೆ. ತಂದೆತಾಯಿಯೂ ತಮ್ಮ ಮಗು ಸುಂದರವಾಗಿ ಕಾಣಬೇಕು ಎಂದು ಸಾಕಷ್ಟು ಹುಡುಕಾಟ ನಡೆಸಿ ಮಕ್ಕಳ ಬಟ್ಟೆ ಖರೀದಿಸುತ್ತಾರೆ. ಜೀನ್ಸ್ ಶಾರ್ಟ್ಸ್ ಜೊತೆಗೆ ಸಸ್ಪೆಂಡರ್ಸ್ ಹಾಗೂ ಜಂಪರ್‌ಗಳು ಸಖತ್ ಆಗಿ ಕಾಣುತ್ತವೆ.ಜಂಪರ್ ವಿಭಿನ್ನ ಲುಕ್ ಕೊಡುವುದರಿಂದ ಮಕ್ಕಳು ಮುದ್ದಾಗಿ ಕಾಣುತ್ತಾರೆ.

ಇಂದು ಮಾರುಕಟ್ಟೆಯಲ್ಲಿ ನಾನಾ ವಿನ್ಯಾಸದ ಮಕ್ಕಳ ಶಾರ್ಟ್ಸ್ ಲಭ್ಯವಿದೆ. ಹೆಚ್ಚು ಕ್ಯಾಶುಯಲ್ ನೋಟಕ್ಕಾಗಿ ಡೆನಿಮ್ ಮತ್ತು ಕಾರ್ಗೋ ಶಾರ್ಟ್ಸ್, ಸ್ವಿಮಿಂಗ್‌ಗಾಗಿ ಮೆಶ್ ಶಾರ್ಟ್ಸ್ ಮತ್ತು ಸ್ಪೋರ್ಟ್ಸ್‌ನಲ್ಲಿರುವವರಿಗೆ ಅಥ್ಲೆಟಿಕ್ ಶಾರ್ಟ್ಸ್ ಇವೆ. ನಿಮ್ಮ ಮಗುವಿಗೆ ಯಾವುದು ಸೂಕ್ತ ಎಂದು ನೀವೇ ಆಯ್ಕೆ ಮಾಡಿ.